## ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು ಜಿಲ್ಲಾಮಟ್ಟದ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆ ಸಹಾಯಕರು ಹಾಗೂ ಕಾವಲುಗಾರರ ಹುದ್ದೆಗಳ ನೇರ ನೇಮಕಾತಿ ಆಯ್ಕೆ ಸಮಿತಿ ಮಂಡ್ಯ ಜಿಲ್ಲೆ, ಮಂಡ್ಯ.**

**ಸಂಖ್ಯೆ:ಉ.ನಿ:ಸಕಇ:ಮಂ:ಸಿಬ್ಬಂದಿ:ಸಿಆರ್:01:2016-17** **ದಿನಾಂಕ:20-10-2016**

# ಅಧಿಸೂಚನೆ

# ಸಮಾಜ ಕಲ್ಯಾಣ ಇಲಾಖೆಯ ಅಡುಗೆ ಸಹಾಯಕರು ಹಾಗೂ ಕಾವಲುಗಾರರ ಹುದ್ದೆಗಳಿಗೆ – ನೇರ ನೇಮಕಾತಿ

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಅಡುಗೆ ಸಹಾಯಕರು ಹಾಗೂ ಕಾವಲುಗಾರರ ಹುದ್ದೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಕಇ 268 ಪಕಸೇ 2015 ದಿನಾಂಕ: 24.08.2016 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಕಇ 268 ಪಕಸೇ 2015 ದಿನಾಂಕ:29.09.2016ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ON-LINE ಮೂಲಕ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

1. ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು.

   i) ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅಧಿಸೂಚನೆಯ ಅನುಬಂಧದಲ್ಲಿರುವ ನಮೂನೆಗಳಲ್ಲಿಯೇ ಕಡ್ಡಾಯವಾಗಿ ಪಡೆದಿಟ್ಟುಕೊಂಡಿರತಕ್ಕದ್ದು.

   ii) ಅಡುಗೆ ಸಹಾಯಕರು ಮತ್ತು ಕಾವಲುಗಾರರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳಿಗೆ ಅಂಕರಹಿತ ಪ್ರಾಯೋಗಿಕ ಪರೀಕ್ಷೆ/ದೈಹಿಕ ಪರೀಕ್ಷೆಗಳನ್ನು ನಡೆಸಲಾಗುವುದು.

   iii) ಅಡುಗೆ ಸಹಾಯಕರು ಹಾಗೂ ಕಾವಲುಗಾರರ ಹುದ್ದೆಗಳಿಗೆ ನಡೆಸಲಾಗುವ ಅಂಕರಹಿತ ಪ್ರಾಯೋಗಿಕ ಪರೀಕ್ಷೆ/ದೈಹಿಕ ಪರೀಕ್ಷೆಯಲ್ಲಿ ಅರ್ಹರಾದವರನ್ನು ಮಾತ್ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಜೇಷ್ಠತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

   iv) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ : 25.10.2016.
   ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 19.11.2016.
   ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ : 21.11.2016.

ಅರ್ಜಿಗಳನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಿ ಶುಲ್ಕವನ್ನು ನಿಗದಿಪಡಿಸಿದ ಅಂಚೆ ಇಲಾಖೆಯ ಇ-ಅಂಚೆ ಮೂಲಕ ಜಮಾಗೊಳಿಸುವುದು. ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**2. ಅರ್ಜಿ ಶುಲ್ಕ :**

| ಕ್ರ ಸಂ. | ಜಾತಿ/ಪ್ರವರ್ಗ | ಅಡುಗೆ ಸಹಾಯಕರು | ಕಾವಲುಗಾರರು |
|---|---|---|---|
| 1. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–I ಅಭ್ಯರ್ಥಿಗಳಿಗೆ | ರೂ.100/– | ರೂ.100/– |
| 2. | ಪ್ರವರ್ಗ–2ಎ, 2ಬಿ, 3ಎ, 3ಬಿ ಹಾಗೂ ಸಾಮಾನ್ಯ ಅರ್ಹತೆ ಅಭ್ಯರ್ಥಿಗಳಿಗೆ | ರೂ.200/– | ರೂ.200/– |
| ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. (ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರು ಮತ್ತು ಅದಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಿಯಿಂದ ಪ್ರಮಾಣ ಪತ್ರ ಹೊಂದಿರುವವರು). | | | |

ಅಭ್ಯರ್ಥಿಯು ಎರಡು ಹುದ್ದೆಗಳಿಗೂ ಅರ್ಜಿ ಸಲ್ಲಿಸುವುದಾದಲ್ಲಿ ಆಯಾ ಹುದ್ದೆಗಳಿಗೆ ನಿಗದಿಪಡಿಸಿರುವ ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸುವುದು. ಅರ್ಜಿ ಶುಲ್ಕವನ್ನು ಕರ್ನಾಟಕದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ ಇ–ಅಂಚೆ ಮೂಲಕ ಜಿಲ್ಲಾಧಿಕಾರಿಗಳು ಹಾಗೂ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ ರವರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಂಡ್ಯ ಶಾಖೆ ಜಂಟಿ ಖಾತೆ ಸಂಖ್ಯೆ:64089370948 (I.F.S.C. Code:SBMY0040035) ಪಾವತಿಸುವುದು. ಜಮಾ ಮಾಡಿದ ಚಲನ್‌ನ್ನು ಪಡೆದಿಟ್ಟುಕೊಳ್ಳುವುದು.

**3. ನೇಮಕಾತಿ ಹುದ್ದೆಗಳ ವಿವರ:**

| ಕ್ರ ಸಂ | ಹುದ್ದೆಗಳ ವಿವರ | ವೃಂದ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|---|
| 1. | ಮಂಡ್ಯ ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ **'ಅಡುಗೆ ಸಹಾಯಕರು'** | 'ಡಿ' | ರೂ.9,600–200–12,000–250–13,000–300–14,200–350–14,550/– | **40** |
| 2. | ಮಂಡ್ಯ ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ **'ಕಾವಲುಗಾರರು'** | 'ಡಿ' | ರೂ.9,600–200–12,000–250–13,000–300–14,200–350–14,550/– | **33** |

**4. ಹುದ್ದೆಗಳ ವರ್ಗೀಕರಣ:**

**1) ಅಡುಗೆ ಸಹಾಯಕರು**

ಈ ಹಿಂದಿನ ನೇಮಕಾತಿಯ ಅಂತಿಮ ರೋಸ್ಟರ್ ಬಿಂದು ಸಂಖ್ಯೆ – **19**

ಹಾಲಿ ನೇಮಕಾತಿಯಲ್ಲಿ ಪ್ರಾರಂಭಿಸುತ್ತಿರುವ ರೋಸ್ಟರ್ ಬಿಂದು ಸಂಖ್ಯೆ – **20**

**(ಹೈದರಾಬಾದ್ ಕರ್ನಾಟಕ ಹೊರತು ಪಡಿಸಿ 23 ಜಿಲ್ಲೆಗಳಿಗೆ ಮಾತ್ರ, 100ಕ್ಕೆ ಶೇ100%ರಷ್ಟು ಹುದ್ದೆಗಳು)**

| ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ<br>ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ<br>**' ಅಡುಗೆ ಸಹಾಯಕರು ' ಉಳಿದ ಮೂಲ ವೃಂದದ** ಹುದ್ದೆಗಳ ಸಂಖ್ಯೆ – 40 | | | | | | | | |
|---|---|---|---|---|---|---|---|---|
| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಸ್ಸೈ | ಕ.ಮಾ.ಅ | ಯೋ.ಅ | ಅಂ.ವಿ. | ಒಟ್ಟು |
| 1 | 2 | 3 | 4 | 5 | 6 | 7 | 8 | 9 |
| ಪ.ಜಾ | 1 | 2 | 2 | 1 | – | – | 1 | 7 |

| | | | | | | | | |
|---|---|---|---|---|---|---|---|---|
| ಪ.ಪಂ. | – | 1 | – | – | – | – | – | 1 |
| ಪ್ರ–1 | – | 1 | 1 | – | – | – | – | 2 |
| ಪ್ರ–2(ಎ) | 1 | 2 | 3 | – | – | – | 1 | 7 |
| ಪ್ರ–2(ಬಿ) | – | 1 | – | – | – | – | – | 1 |
| ಪ್ರ–3(ಎ) | – | 1 | – | – | – | – | – | 1 |
| ಪ್ರ–3(ಬಿ) | – | 1 | – | – | – | – | – | 1 |
| ಸಾ.ಅ | 3 | 7 | 5 | 2 | 1 | 1 | 1 | 20 |
| ಒಟ್ಟು | 5 | 16 | 11 | 3 | 1 | 1 | 3 | 40 |

**2) ಕಾವಲುಗಾರರು**

ಈ ಹಿಂದಿನ ನೇಮಕಾತಿಯ ಅಂತಿಮ ರೋಸ್ಟರ್ ಬಿಂದು ಸಂಖ್ಯೆ – 01

ಹಾಲಿ ನೇಮಕಾತಿಯಲ್ಲಿ ಪ್ರಾರಂಭಿಸುತ್ತಿರುವ ರೋಸ್ಟರ್ ಬಿಂದು ಸಂಖ್ಯೆ – 02

**(ಹೈದರಾಬಾದ್ ಕರ್ನಾಟಕ ಹೊರತು ಪಡಿಸಿ 23 ಜಿಲ್ಲೆಗಳಿಗೆ ಮಾತ್ರ, 100ಕ್ಕೆ ಶೇ 100%ರಷ್ಟು ಹುದ್ದೆಗಳು)**

| ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ<br>ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ<br>**'ಕಾವಲುಗಾರರು' ಉಳಿದ ಮೂಲ ವೃಂದದ ಹುದ್ದೆಗಳ ಸಂಖ್ಯೆ–** | | | | | | | | |
|---|---|---|---|---|---|---|---|---|
| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಸ್ಯೆ | ಕ.ಮಾ.ಅ | ಯೋ.ಅ | ಅಂ.ವಿ. | ಒಟ್ಟು |
| 1 | 2 | 3 | 4 | 5 | 6 | 7 | 8 | 9 |
| ಪ.ಜಾ | – | 2 | 2 | – | – | – | 1 | 5 |
| ಪ.ಪಂ. | 1 | – | – | – | – | – | – | 1 |
| ಪ್ರ–1 | 1 | 1 | – | – | – | – | – | 2 |
| ಪ್ರ–2(ಎ) | 1 | 2 | 1 | – | – | – | 1 | 5 |
| ಪ್ರ–2(ಬಿ) | 1 | – | – | – | – | – | – | 1 |
| ಪ್ರ–3(ಎ) | 1 | – | – | – | – | – | – | 1 |
| ಪ್ರ–3(ಬಿ) | 1 | – | – | – | – | – | – | 1 |
| ಸಾ.ಅ | 2 | 6 | 5 | 1 | 1 | 1 | 1 | 17 |
| ಒಟ್ಟು | 8 | 11 | 8 | 1 | 1 | 1 | 1 | 33 |

**5. ಅಭ್ಯರ್ಥಿಗೆ ನಿಗದಿಪಡಿಸಿದ ಅರ್ಹತೆಗಳು:**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಅರ್ಹರಾಗಿರುವುದಿಲ್ಲ.
3. ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
4. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಜಿಲ್ಲಾ ನೇಮಕಾತಿ ಸಮಿತಿಯು ಕಾಯ್ದಿರಿಸಿಕೊಂಡಿದೆ.
5. ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಅಡುಗೆ ಸಹಾಯಕರು ಹಾಗೂ ಕಾವಲುಗಾರರ ಹುದ್ದೆಗಳಿಗೆ ನೇರ ನೇಮಕಾತಿ